ಗುಲ್ಬರ್ಗದಲ್ಲಿ ಕುಡಿಯುವ ನೀರಿನ ಅಭಾವ.

*೮೯೬. ಶ್ರೀ ಎಸ್.ಕೆ. ಕಾಂತಾ (ಗುಲ್ಬರ್ಗ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗ ನಗರದ ಜನರಿಗೆ ಕುಡಿಯುವ ನೀರಿನ ಸಮಸ್ಯೆ ವಿಪರೀತವಾಗಿದ್ದು ಅದನ್ನು ನಿವಾರಿಸಲು ಸರ್ಕಾರದವರು ಹಾಕಿಕೊಂಡಿರುವ ಯೋಜನೆಯೇನು ? ಹಾಗು ಅದಕ್ಕೆ ಎಷ್ಟು ಹಣ ಖರ್ಚು ಮಾಡಲಾಗಿದೆ ?

ಶ್ರೀ ಎಂ. ಚಂದ್ರಶೇಖರ (ನಗರಾಭಿವೃದ್ಧಿ ಮಂತ್ರಿಗಳು). –

ಅ) ಸೆಪ್ಟೆಂಬರ್ ೧೯೮೮ರಲ್ಲಿ ಗುಲ್ಬರ್ಗ ನಗರದ ನೀರು ಸರಬರಾಜು ಯೋಜನೆಯು ಎರಡನೆಯ ಹಂತ ಕಾರ್ಯಗತವಾಗಿದ್ದು ಈಗ ಜನರಿಗೆ ಎಷ್ಟು ಪ್ರತಿ ತಲಾ ೨೦ ಗ್ಯಾಲನ್ ನೀರು ಒದಗಿಸಲಾಗುತ್ತಿದೆ. ೪೫.೬ ಲಕ್ಷ ರೂಪಾಯಿಗಳ ಅಂದಾಜಿನ ಗುಲ್ಬರ್ಗ ನಗರ ನೀರು ಸರಬರಾಜು ಯೋಜನೆ ಮೂರನೆಯ ಹಂತವೂ ಮಂಜೂರಾಗಿದ್ದು ಅದರ ಕೆಲಸವು ಪ್ರಗತಿಯಲ್ಲಿದೆ. ಈ ಯೋಜನೆಗೆ ೧೯೮೪ ಜನವರಿ ಕೊನೆಯವರೆಗೆ ೧೬.೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಶ್ರೀ ಸಂಗಮೇಶ್ವರ ಸರದಾರ್.—ಇತ್ತೀಚೆಗೆ ಗುಲ್ಬರ್ಗ ನಗರ ಕಾರ್ಪೊರೇಷನ್ ಆಗಿದೆ. ಜನಸಂಖ್ಯೆ ಮೂರು ಲಕ್ಷಕ್ಕೂ ಮಿಕ್ಕಿದೆ. ಮೂರನೆಯ ಹಂತದ ಕೆಲಸವನ್ನು ಕೈಗೆತ್ತಿಕೊಂಡ ಗುಲ್ಬರ್ಗ ನಗರವಾಸಿಗಳಿಗೆ ನೀರು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ, ಒಂದು ಎರಡು ಹಂತದ ಕೆಲಸ ಮುಗಿದಿದ್ದು, ಮೂರನೆಯ ಹಂತವನ್ನು ತೆಗೆದುಕೊಳ್ಳಬೇಕು. ಈ ಹಂತವನ್ನು ಮುಗಿಸಿದರೆ ಮೂರು ಲಕ್ಷ ಮೂರು ಸಾವಿರ ಜನಸಂಖ್ಯೆಗೆ ನೀರು ಒದಗಿಸುವುದಕ್ಕೆ ಅನುಕೂಲವಾಗುತ್ತದೆ.

ಬದಾಮಿ ತಾಲ್ಲೂಕಿನ ಕೆರೂರಿಗೆ ಕುಡಿಯುವ ನೀರು ಸರಬರಾಜು ಯೋಜನೆ.

*೮೯೭. ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಬಾದಾಮಿ ತಾಲ್ಲೂಕು ಕೆರೂರು ಪುರಸಭೆಗೆ ಯಾವ ವರ್ಷದಲ್ಲಿ ಕುಡಿಯುವ ನೀರಿನ ಯೋಜನೆ ಮಂಜೂರಾಗಿದೆ ?

ಆ) ಸದ್ಯದ ಜನಸಂಖ್ಯೆಯನ್ನು ಆಧರಿಸಿ ಆ ಯೋಜನೆಯಿಂದ ಕುಡಿಯುವ ನೀರಿನ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ, ಸದರಿ ತೊಂದರೆಯನ್ನು ನಿವಾರಿಸಿ ಶಾಶ್ವತ ಪರಿಹಾರ ನೀಡಲು ಈ ವರ್ಷದಲ್ಲಿ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಕೆರೂರು ಪುರಸಭೆಯ ಕುಡಿಯುವ ನೀರಿನ ಯೋಜನೆಯು ಅಕ್ಟೋಬರ್ ೧೯೮೮ರಲ್ಲಿ ಮಂಜೂರಾಗಿದೆ.

ಆ) ಬಂದಿದೆ.

ಇ) ಇಲ್ಲ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ೧೫ ವರ್ಷಗಳ ಹಿಂದೆ ಜನಸಂಖ್ಯೆ ಎಷ್ಟಿತ್ತು ? ೧೯೮೮ರಲ್ಲಿ ಇರತಕ್ಕ ಜನಸಂಖ್ಯೆ ಎಷ್ಟು ? ತಾವು ತಲಾ ಎಷ್ಟು ಗ್ಯಾಲನ್ ನೀರು ಕೊಡುತ್ತಿದ್ದೀರಿ ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಹಿಂದಿನ ಜನಸಂಖ್ಯೆ ಮಾಹಿತಿ ಇಲ್ಲ. ಈಗ ಸಂಪಾರು ೧೫,೧೯೪ ಜನಸಂಖ್ಯೆ ಇದೆ. ತಲಾ ೧೦ ಗ್ಯಾಲನ್ ಕೊಡಬೇಕೆಂದು ಯೋಜನೆ

ಮಾಡಿದ್ದೆವು ಅದು ಕಡಿಮೆಯಾಗುತ್ತಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ ಈಗ ಹೊಸ ಯೋಜನೆ ಸಿದ್ಧವಾಗಿದೆ ; ಯೋಜನೆಯು ಬೆಲೆ ನೋಡಿದರೆ ತುಂಬಾ ಜಾಸ್ತಿಯಾಗಿದೆ. ಈಗ ಅದು ಸುಮಾರು ೧೦೬ ಲಕ್ಷ ರೂಪಾಯಿಗಳು ಆಗುತ್ತದೆ. ೨೦ ಕಿಲೋಮೀಟರ್ ದೂರದಲ್ಲಿರುವ ಮಲಪ್ರಭಾ ನಾಲೆಯಿಂದ ನೀರನ್ನು ತರಬೇಕಾಗುತ್ತದೆ. ಹಾಲಿ ಇರುವಂಥ ಯೋಜನೆ ಜೊತೆಗೆ ೪ ಕಿಲೋಮೀಟರ್ ದೂರದಲ್ಲಿರುವ ಮಾಳಗಿ ಹಳ್ಳದಿಂದ ನೀರು ತರುವಂಥ ಯೋಜನೆ ಕಾರ್ಯಗತ ಮಾಡಿದರೆ ಸಧ್ಯದ ಪರಿಸ್ಥಿತಿ ಉತ್ತಮವಾಗುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಸ್ವಾಮಿ, ಮಂತ್ರಿಯವರ ಉತ್ತರದಿಂದಲೇ ಅಲ್ಲಿ ತೊಂದರೆ ಇದೆ ಎನ್ನುವುದು ಗೊತ್ತಾಗುತ್ತದೆ. ಬಾದಾಮಿ ತಾಲ್ಲೂಕು ಕೇಂದ್ರ ಪುರಸಭೆಯು ವ್ಯಾಪ್ತಿಯಲ್ಲಿರುವ ನಗರವಾಸಿಗಳಿಗೆ ಕುಡಿಯುವ ನೀರಿನ ತೊಂದರೆ ಯಾವಾಗಲೂ ಇದ್ದೇ ಇರುತ್ತದೆ. ಜೊತೆಗೆ ಅದು ಬರಗಾಲ ಪ್ರದೇಶವೂ ಆಗಿರುವುದರಿಂದ ಮಾಳಗಿ ಹಳ್ಳದಿಂದ ತರುವ ನೀರಿನ ಕೆಲಸವನ್ನು ಇದೇ ವರ್ಷದಲ್ಲಿಯೇ ಮುಗಿಸಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ನಾವು ಆ ಕಾರ್ಯಕ್ರಮ ಹಾಕಬೇಕಾದರೆ ಪುರಸಭೆಯವರು ೧೮ಲಕ್ಷ ವಂತಿಗೆ ಕೊಡಬೇಕಾಗುತ್ತದೆ. ಮೊದಲನೆಯ ಕಂತಾಗಿ ೧.೮ಲಕ್ಷ ರೂಪಾಯಿಗಳನ್ನು ಅವರು ಕಟ್ಟಿದರೆ ಈ ಯೋಜನೆಯನ್ನು ಪರಿಶೀಲನೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮ್ಯಾಚಿಂಗ್ ಗ್ರಾಂಟ್‌ನಲ್ಲಿ ಅಡ್ಜಸ್ಟ್ ಮಾಡಿ, ನೀರಂ ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಪರಿಶೀಲನೆ ಮಾಡುತ್ತೇನೆ.

ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆ

೧೦೬೪ ಶ್ರೀ ಪತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಸಹಕಾರ ಮಂತ್ರಿಗಳಂ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಕ್ಷಿಣ ಕನ್ನಡ ಜಿಲ್ಲಾ ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಬೇಕಾಗುವ ಕಬ್ಬನ್ನು ಮುಂಜೂರಾಗಿರುವ ಸಿಬ್ಬಂದಿ ವರ್ಗಗಳ ಸಂಖ್ಯಾ ಬಲವೆಷ್ಟು ? (ದರ್ಜೆವಾರು ವಿವರಗಳನ್ನು ಕೊಡುವುದು)

ಆ. ಈಗ ಇರುವ ಸಿಬ್ಬಂದಿ ವರ್ಗಗಳ ಸಂಖ್ಯಾ ಬಲವೆಷ್ಟು ! (ವಿವರಗಳನ್ನು ಕೊಡುವುದು)

ಇ. ಸದರಿ ಕಾರ್ಖಾನೆಗೆ ಸಿಬ್ಬಂದಿ ನೇಮಕಾತಿ ಮಾಡುವಾಗ ಯಾವ ಆಧಾರದ ಮೇಲೆ ನೇಮಕ ಮಾಡಲಾಗುವುದು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು):—

ಅ. ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆ' ಬ್ರಹ್ಮಾವರ ತನ್ನ ಕಬ್ಬು ಸುರಿಯುವ ಕಾರ್ಯ ಪ್ರಾರಂಭವಾದ ಮೇಲೆ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಮಹಾ ಮಂಡಳಿಯವರು ತಯಾರಿಸಿರುವ ಸಿಬ್ಬಂದಿ ನೇಮಕಾತಿಯ ಸೆಲಹೆಯಂತೆ ದಿನ ಒಂದಕ್ಕೆ ೧೨೫೦ ಟನ್ ಕಬ್ಬು ಸುರಿಯುವ ಸಾಮರ್ಥ್ಯ ಹೊಂದಿರುವ ಕಾರ್ಖಾನೆಗೆ ೫೭೫ ನೌಕರರು ಬೇಕಾಗುತ್ತದೆ. ಅದರಲ್ಲಿ ೨೪೨ ಕಾಯಂ ನೌಕರರು ಹಾಗೂ ೩೩೩ ತಾತ್ಕಾಲಿಕ ನೌಕರರು ಇರುತ್ತಾರೆ. ಈ ವೈಕ ಸಕ್ಕರೆ ನಿರ್ದೇಶಕರು ಕಾರ್ಖಾನೆಯ ಕೋರಿಕೆಯ ಮೇರೆಗೆ ೫೭೫ ಜನ ನೌಕರರ ನೇಮಕಾತಿಗೆ ಅನುಮತಿ ನೀಡಿರುತ್ತಾರೆ. ಅದರಂತೆ ದರ್ಜೆವಾರು ಕೆಳಕಂಡಂತಿದೆ.